**<u>ಸಾಕ್ಷಿಯನ್ನು ದಿನಾಂಕ *08.04.2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ಮಂಜುಳಾರವರನ್ನು ನಾನು, ಕುಮಾರ್ ಮತ್ತು ರಾಜು ರಿಂಗ್ ರೋಡ್ ನಲ್ಲಿ ಇರುವಂತಹ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ದಾಖಲು ಮಾಡಿದ್ದೆವು. ಮಂಜುಳಾರವರಿಗೆ ಯಾರಿಂದ ಗಾಯ ಆಗಿತ್ತು ಎಂದು ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರ ಮುಂದೆ ನಾನು ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ಈ ಹಿಂದೆ ನೋಡಿರುವುದಿಲ್ಲ. ನನ್ನ ಮನೆಯವರಾಗಲೀ ಬೇರೆಯಾರೆ ಆಗಲೀ ಆರೋಪಿತನ ಬಗ್ಗೆ ನನಗೆ ಹೇಳಿರಲಿಲ್ಲ.

**<u>ಈ ಹಂತದಲ್ಲಿ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>**

**<u>ಪಾಟೀ ಸವಾಲು ಸರ್ಕಾರಿ ಅಭಿಯೋಜಕರಿಂದಃ</u>**

ನಾನು ಪೊಲೀಸರ ಮುಂದೆ ದಿನಾಂಕ 30.03.2023 ರಂದು ಹೇಳಿಕೆ ಕೊಟ್ಟು ಆ ಹೇಳಿಕೆಯಲ್ಲಿ ನ್ಯಾಯಾಲದ ಮುಂದೆ ಹಾಜರಿರುವ ಆರೋಪಿತನು ಮಂಜುಳಾ ರವರಿಗೆ ಗಂಟಲು ನೋವು ಇರುತ್ತದೆ ಬಿಸಿ ನೀರು ಬೇಕು ಎಂದು ಕೇಳಿ ಅವರು ಒಳಗೆ ಹೋಗಿ ಬಿಸಿ ನೀರು ಕಾಯಿಸಲು ಇಟ್ಟು ಹೊರಗೆ ಬರುವಾಗ ಆರೋಪಿತನು ಮನೆಯ ಬೋಲ್ಟ್ ಅನ್ನು ಹಾಕಿ ತಾನು ಕೈಯಲ್ಲಿ ಹಿಡಿದುಕೊಂಡು ಹೋಗಿದ್ದ ಚೊಂಬಿನಿಂದ ಹಲ್ಲೆ ಮಾಡಿ ಮೈಮೇಲೆ ಇದ್ದ ಚಿನ್ನವನ್ನು ಕಿತ್ತುಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಾನು ಮತ್ತು ಕುಮಾರ್ ಮಂಜುಳಾ ರವರನ್ನು ನಂಜೇಗೌಡ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದರೆ

ಸರಿಯಲ್ಲ. ನಾನು ಈ ಬಗ್ಗೆ ದಿನಾಂಕ 30.03.2023 ರಂದು ಪೊಲೀಸರಿಗೆ ಈಗ ಓದಿ ಹೇಳಿದ ನಿಪಿ- 23 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಮತ್ತು ಕುಮಾರ್ ರವರು ಮಂಜುಳಾ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಮೇಲೆ ದೀಪು ನನಗೆ ಹೊಡೆದು ಒಡವೆಗಳನ್ನು ಕಿತ್ತುಕೊಂಡು ಹೋದ ಎಂದು ಹೇಳಿದ್ದರು ಎಂದು ಪೊಲೀಸರ ಮುಂದೆ ಹೇಳಿರುವುದಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**